ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು. ದಿಃ30.10.2015. ಒ.ಎಸ್.ನಂ.51/2007
ಪಾಟೀ ಸವಾಲು ಃ ಶ್ರೀ. ಸಿ ಎಸ್ ಎ ಃ ವಕೀಲರಿಂದ ಃ- ಪಿ.ಡಬ್ಲ್ಯೂ.2

1952ರಲ್ಲಿ ನಾನು ಹುಟ್ಟಿರಲಿಲ್ಲ ಎಂದರೆ ಸರಿ. ವಾದಿಗಳ ತಂದೆ ಎಷ್ಟನೇ ಸಾಲಿನಲ್ಲಿ ತೀರಿಹೋಗಿರುತ್ತಾರೆಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ತಂದೆ ಯಾವಾಗ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು 1952ರಲ್ಲಿ ಹುಟ್ಟಿಲ್ಲದೇ ಇದ್ದುದರಿಂದ ಸರ್ವೆ ನಂ.24/1 ರಲ್ಲಿ ಯಾರು ಸ್ವಾಧೀನಾನುಭವದಲ್ಲಿ ಇದ್ದರು ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. 1952ರಲ್ಲಿ ನಾನು ಹುಟ್ಟದೇ ಇದ್ದರಿಂದ ನಿಪಿ.9ಕ್ಕೆ ಯಾರು ಸಹಿ ಮಾಡಿದ್ದರು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ಮತ್ತು ಸದರಿ ಕ್ರಯಪತ್ರವನ್ನು ಯಾರು ಬರೆದುಕೊಟ್ಟರು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ.

ಸರ್ವೆ ನಂ.24/1ರಲ್ಲಿ ನಮ್ಮ ತಂದೆಯವರು ಸ್ವಾಧೀನದಲ್ಲಿ ಇದ್ದರು ಮತ್ತು ಅವರ ನಂತರ ನಾನು ಸ್ವಾಧೀನದಲ್ಲಿ ಇದ್ದೇನು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿಯು ಇರುತ್ತದೆ ಎಂದು ನುಡಿದಿರುತ್ತಾರೆ. ಅಬ್ಬತ್ನಹಳ್ಳಿ ನಾಯಕ ರಂಗಯ್ಯನಿಗೆ 3 ಜನ ಮಕ್ಕಳು ಅವರುಗಳು ಚಿಕ್ಕರಂಗಯ್ಯ, ರಾಮಯ್ಯ ಮತ್ತು ಲಕ್ಷ್ಮಣಯ್ಯ ಎಂದು ಇರುತ್ತದೆ. ಅಬ್ಬತ್ನಹಳ್ಳಿ ರಂಗಯ್ಯನ ಮಕ್ಕಳಿಗೂ ಮತ್ತು ವಾದಿಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. 1ನೇ ಹಾಗೂ 4ನೇ ಪ್ರತಿವಾದಿಯ ತಂದೆಯ ಹೆಸರು ವಾಲೇಕಾರ್ ರಂಗಯ್ಯ ಅಲ್ಲ ಎಂದರೆ ಸುಳ್ಳು. ನಾನು ಹಾಗೂ ವಾದಿಗಳು ವಿಶ್ವಾಸಿಕರಿದ್ದು ಪ್ರತಿವಾದಿಗಳನ್ನು ಕಂಡರೆ ನನಗೆ ಆಗುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳು ಅಬ್ಬತ್ನಹಳ್ಳಿಯ ವಾಸಿಗಳು ಅಲ್ಲ, ಅವರುಗಳು ಪ್ರಭುವನಹಳ್ಳಿಯ ವಾಸಿಗಳು ಇರುತ್ತಾರೆಂದರೆ ಸುಳ್ಳು. ವಾದಿಗಳು ನಾಯಕ ಜಾತಿಗೆ ಸೇರಿದವರಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.
ಮರುವಿಚಾರಣೆ ಃ ಇಲ್ಲ

(ನನ್ನ ಸಮಕ್ಷಮ ತೆ ನ್ಯಾ ಬೆ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಗುಬ್ಬಿ